# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

ಎಮ್ ವಿ ಸಿ ನಂಃ **1076/2022**
ಪಿ.ಡಬ್ಲ್ಯೂಃ**1,** ಬಸವರಾಜ

ದಿನಾಂಕ :**04-08-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.
ಪಾಟಿ ಸವಾಲು :- ಶ್ರೀ ವಿ.ವಿ.ಸಿ ವಕೀಲರಿಂದ

ನನಗೆ ಅಪಘಾತವು 2 ವರ್ಷ ಹಿಂದೆ ಆಗಿದ್ದು ತಾರೀಖು ನೆನಪಿಲ್ಲ ಎಂದು ಹೇಳುತ್ತಾರೆ. ಆ ದಿನ ನಾನು ಸುಂಟನೂರ ಕ್ರಾಸನಲ್ಲಿ ಬಸ್ಸನಲ್ಲಿ ಬಂದು ಇಳಿದು ಸುಂಟುನೂರು ಗ್ರಾಮಕ್ಕೆ ನಡೆದು ಕೊಂಡು ಹೊಗುತ್ತಿದೆ ಆಗ ರಾತ್ರಿ 10 ಗಂಟೆ ಸಮಯ ಆಗಿತ್ತು. ಆ ಸಮಯದಲ್ಲಿ ಮೊಟರ ಸೈಕಲ ಸವಾರ ಹಿಂದಿನಿಂದ ಬಂದು ಡಿಕ್ಕಿ ಪಡಿಸಿರುತ್ತಾರೆ. ಆ ಸಮಯದಲ್ಲಿ ನನ್ನ ಸೇಹಿತ ಬಸವರಾಜು ನನ್ನ ಜೋತೆಯಲ್ಲಿ ಇದ್ದರು. ಆ ಸಮಯಲ್ಲಿ ನಾನು ಬಸವರಾಜು ಇಬ್ಬರು ಮೋಟರ ಸೈಕಲನಲ್ಲಿ ಹೋಗುತ್ತಿದ್ದಾಗ ಅಪಘಾತ ವಾಗಿದ್ದು ಎಂದು ಸೂಚಿಸುವುದು ಸರಿಯಲ್ಲ. ನಂತರ ನಾನು ಕಲಬುರ್ಗಿಯ ಆಸ್ಪತ್ರೆಯಲ್ಲಿ 7 ದಿನ ಚಿಕಿತ್ಸೆ ಪಡೆದಿರುತ್ತೆನೆ. ಆ ಸಮಯಲ್ಲಿ ನನಗೆ 39 ವರ್ಷ ಮತ್ತು ನಾನು ಕಾರಪೆಂಟರ ಕೆಳಗೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದೇ. ನನಗೆ ತಿಂಗಳಿಗೆ 8 ಸಾವಿರ ರೂಪಾಯಿ ಕೊಡುತ್ತಿದ್ದರು. ನಾನು ಆ ರೀತಿ ಯಾವುದೇ ಕೆಲಸ ಮಾಡುತಿರಲಿಲ್ಲ ಮತ್ತು ನನಗೆ ಅಷ್ಟುಂದು ಸಂಪದಾನೆ ಇರಲಿಲ್ಲ ಎಂದು ಸೂಚಿಸವುದು ಸರಿಯಲ್ಲ. ಆಸ್ಪತ್ರೆಯಲ್ಲಿ 2 ವರೆ ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ನಾನು ಮತ್ತು ಇನ್ನೂ ಇಬ್ಬರು ಮೋಟರ ಸೈಕಲನಲ್ಲಿ ಹೂಗುವಾಗ ಅಪಘಾತ ಆಗಿದ್ದರು ಸಹ ನಡೆದುಕೊಂಡು ಹೋಗುವಾಗ ಅಪಘಾತವಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪರಿಹಾರ ಸಿಗಲಿ ಎಂದು ದಾಖಲೆಗಳನ್ನು ಸೃಷ್ಟಿ ಸಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.